

## ಸ್ಕ್ರಂಚಿ ಉಪಯೋಗ ಏನು?

- ಫ್ಯಾಷನ್‌ಪ್ರಿಯರಿಗೆ ಅಚ್ಚುಮೆಚ್ಚಾಗಿರುವ ಸ್ಕ್ರಂಚಿ ಮಾಡರ್ನ್ ಲುಕ್ ಕೊಡಲು ಸಹಕಾರಿ.
- ಒಮ್ಮೆ ಕೇಶವಿನ್ಯಾಸ ಮಾಡಿಕೊಂಡರೆ ಪದೇ ಪದೇ ಬಿಚ್ಚಿಹೋಗುವುದಿಲ್ಲ.
- ಕೂದಲು ಹಾಳಾಗುವುದಿಲ್ಲ. ಇಲಾಸ್ಟಿಕ್ ಇದ್ದರೂ ತಲೆಕೂದಲಿಗೆ ಹಾಕಿಕೊಂಡರೆ ನೋವು ಬರುವುದಿಲ್ಲ.
- ಮ್ಯಾಚಿಂಗ್, ಕಾಂಟ್ರಾಸ್ಟ್, ಮಿಕ್ಸ್ ಅಂಡ್ ಮ್ಯಾಚ್ ಯಾವ ಸ್ಟೈಲಿಗಾದರೂ ಸರಿಹೊಂದುವಂತಿದೆ.
- ಕೇಶ ಶೈಲಿಗೆ ಮಾತ್ರವಲ್ಲದೆ ಕೈಗೆ ಬ್ಯಾಂಡ್‌ನಂತೆಯೂ ಬಳಸಬಹುದು.
- ಬಳಸಿದ ಮೇಲೆ ಮಣ್ಣು, ಕೊಳೆ ಆಗಿದ್ದರೆ ಶುಭ್ರವಾಗಿ ತೊಳೆದು ಒಣಗಿಸಿ ಮತ್ತೆ ಬಳಸಬಹುದು.
- ಸ್ನೇಹಿತೆಯರಿಗೆ ಉಡುಗೊರೆಯಾಗಿ ನೀಡಬಹುದು.
- ಗಿಫ್ಟ್ ಬಾಕ್ಸ್ ಅನ್ನು ಪ್ಯಾಕ್ ಮಾಡಲು ಬಳಸಿದರೆ ಆಕರ್ಷಕವಾಗಿಯೂ ಇರುತ್ತದೆ.



ಇಂತಹ ಸ್ಕ್ರಂಚಿ ತಯಾರಿಸುವುದರಲ್ಲಿ ದಕ್ಷಿಣ ಕನ್ನಡದ ಪುತ್ತೂರಿನ ಹತ್ತನೆ ತರಗತಿ ವಿದ್ಯಾರ್ಥಿನಿ ಇಶಾ ಸುಲೋಚನ ಮುಳಿಯ ನಿಪುಣೆಯಾಗಿದ್ದು, ಫ್ಯಾಷನ್ ಜಗತ್ತಿಗೆ ತನ್ನದೇ ಆದ ಕೊಡುಗೆ ನೀಡುತ್ತಿದ್ದಾಳೆ.

ಕೊರೊನಾದಿಂದಾಗಿ ಶಾಲೆಗೆ ಹೋಗುವ ಕೆಲಸವಿಲ್ಲದೆ, ಮನೆಯಲ್ಲೇ ಆನ್‌ಲೈನ್ ಪಾಠ ಕೇಳುತ್ತಾ, ಮಿಕ್ಕಿದ ಸಮಯದಲ್ಲಿ ಇಶಾ ಸ್ಕ್ರಂಚಿ ತಯಾರಿಸುವ ಕಾಯಕದಲ್ಲಿ ತೊಡಗಿಕೊಳ್ಳುತ್ತಾಳೆ.

ಸ್ಕ್ರಂಚಿ ತಯಾರಿಸಲು ಹೆಚ್ಚಿನ ವಸ್ತು ಬೇಕಾಗಿಲ್ಲ. ಸಲ್ವಾರ್, ಬ್ಲೌಸ್, ಫ್ರಾಕ್‌ಗಳನ್ನು ಹೊಲಿದು ಉಳಿದ ಬಟ್ಟೆಯ ತುಂಡುಗಳನ್ನು ದರ್ಜಿಗಳು ಎಸೆಯುತ್ತಾರೆ. ಇದನ್ನೆಲ್ಲ ಸಂಗ್ರಹಿಸಿ ಬಣ್ಣಬಣ್ಣದ ಸ್ಕ್ರಂಚಿ ತಯಾರಿಸುತ್ತಾಳೆ ಇಶಾ. ಒಂದು ವೇಳೆ ಇಂತಹ ಬಟ್ಟೆ ತುಂಡುಗಳು ಸಿಕ್ಕದೇ ಇದ್ದರೆ, ಬಟ್ಟೆ ಅಂಗಡಿಯಿಂದ ಬೇಕಾದ ಬಣ್ಣದ ಬಟ್ಟೆ ಖರೀದಿಸಿ ತಂದು ಸ್ಕ್ರಂಚಿ ತಯಾರಿಸುವುದು ಈಕೆಯ ಹವ್ಯಾಸ.

ಸ್ಕ್ರಂಚಿಯನ್ನು ಕಾಟನ್ ಬಟ್ಟೆಯಲ್ಲೇ ಮಾಡುವುದು ರೂಢಿಯಾದರೂ, ಹೆಚ್ಚು ವರ್ಣರಂಜಿತ ಹಾಗೂ ವೈವಿಧ್ಯಮಯವಾಗಿ ಮಾಡಲು ರೇಷ್ಮೆ, ಜಾರ್ಜೆಟ್ ಬಟ್ಟೆಗಳನ್ನೂ ಬಳಸಬಹುದು. ಬಟ್ಟೆಯನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ರಬ್ಬರ್‌ಬ್ಯಾಂಡ್ ಅಥವಾ ಇಲಾಸ್ಟಿಕ್ ಅನ್ನು ಒಳಭಾಗಕ್ಕೆ ಸೇರಿಸಿ ಹೊಲಿಯಬೇಕು. ಬಟ್ಟೆ ವೆಲ್ವೆಟ್‌ನಿಂದ ಕೂಡಿದ್ದಾದರೆ ಇನ್ನೂ ಆಕರ್ಷಕ. ಇದರಲ್ಲಿ ಹೂವಿನಾಕಾರದ್ದು ಹೆಚ್ಚು ಮಹಿಳೆಯರನ್ನು ಸೆಳೆಯುತ್ತದೆ.

‘ಗೆಳತಿಯರು ಸ್ಕ್ರಂಚಿ ಬಳಸಿ ಪೋನಿ ಟೇಲ್ ಹಾಕುವುದನ್ನು ನೋಡಿದೆ. ಇದನ್ನು ನಾವೂ ಮನೆಯಲ್ಲೇ ಯಾಕೆ ಮಾಡಬಾರದು ಅನಿಸಿತು. ಯೂಟ್ಯೂಬ್‌ನಲ್ಲಿ ಹುಡುಕಿದಾಗ ಮಾಡುವ ಸರಳವಿಧಾನ ಸಿಕ್ಕಿತು. ಇದನ್ನು ನೋಡುತ್ತಾ ಮಾಡುವುದನ್ನೂ ಕರಗತ ಮಾಡಿಕೊಂಡೆ’ ಎನ್ನುತ್ತಾಳೆ ಇಶಾ.

‘ಒಂದು ಸ್ಕ್ರಂಚಿ ಹೊಲಿಯಲು ಕೇವಲ ಐದು ನಿಮಿಷ ಸಾಕು. ದಿನಕ್ಕೆ ಐವತ್ತು ಸ್ಕ್ರಂಚಿ ಹೊಲಿಯುತ್ತೇನೆ. ಆಸಕ್ತಿ, ತಾಳ್ಮೆ ಜೊತೆಗೆ ಕರಕುಶಲ ಚತುರತೆ ಇದ್ದರೆ ಇದನ್ನು ಯಾರು ಬೇಕಾದರೂ ಮಾಡಬಹುದು. ಬಣ್ಣ, ವಿನ್ಯಾಸ ಆಕರ್ಷಕವಾಗಿರುವುದರಿಂದ ಪುಟ್ಟ ಹುಡುಗಿಯಿಂದ ಹಿಡಿದು ಎಲ್ಲ ಮಹಿಳೆಯರೂ ಇದನ್ನು ಇಷ್ಟಪಟ್ಟು ಖರೀದಿಸುತ್ತಾರೆ. ಆನ್‌ಲೈನ್‌ನಲ್ಲೂ ಖರೀದಿಸಲು ಮಹಿಳೆಯರು ಮುಗಿಬೀಳುತ್ತಿದ್ದಾರೆ’ ಎಂಬುದು ಇಶಾ ಅಭಿಪ್ರಾಯ.

### ಸ್ಕ್ರಂಚಿ ವಿಧಗಳು

ಸ್ಕ್ರಂಚಿಯಲ್ಲಿ ಹಲವು ವಿಧಗಳಿವೆ. ಸಪೂರದ ಸ್ಕ್ರಂಚಿ, ಅಗಲವಾಗಿರುವ ಸ್ಕ್ರಂಚಿ, ಸಿಲ್ಕ್ ಸ್ಕ್ರಂಚಿ, ಮಣಿ ಹೊಂದಿದ ಸ್ಕ್ರಂಚಿ, ಬಳ್ಳಿಯೊಂದಿಗಿನ ಸ್ಕ್ರಂಚಿ, ರೆಕ್ಕೆಯನ್ನು ಹೊಂದಿದ ಸ್ಕ್ರಂಚಿ... ಹೀಗೆ.

ಸಪೂರದ ಸ್ಕ್ರಂಚಿ: ಇದು ರಬ್ಬರ್ ಬ್ಯಾಂಡ್‌ನಿಂದ ಸ್ವಲ್ಪ ಅಗಲವಾಗಿದ್ದು ಕಡಿಮೆ ಬಟ್ಟೆಯನ್ನು ಹೊಂದಿರುತ್ತದೆ. ಇದನ್ನು ಜಡೆ ಹೆಣೆದು ಕೂದಲ ತುದಿಗೆ ಬಂಧಿಯಾಗಿಸಲು ಬಳಸಬಹುದು. ಪುಟಾಣಿ ಮಕ್ಕಳಿಗೆ, ಕಡಿಮೆ ಕೂದಲು ಇರುವವರಿಗೆ ಸರಿ ಹೊಂದುತ್ತದೆ.

ಅಗಲದ ಸ್ಕ್ರಂಚಿ: ಇದು ಸ್ವಲ್ಪ ಅಗಲದ ಬಟ್ಟೆಯನ್ನು ಹೊಂದಿದ್ದು ತುಂಬಾ ನೆರಿಗೆಗಳಿದ್ದು ಹೂವಿನಂತೆ ಕಾಣುತ್ತದೆ. ಶಾಲಾ ಮಕ್ಕಳಿಗೆ, ಮಹಿಳೆಯರಿಗೆ ಹೇಳಿ ಮಾಡಿಸಿದ್ದು.

ಮಣಿ ಹೊಂದಿದ ಸ್ಕ್ರಂಚಿ: ಇದು ಸಮಾರಂಭಗಳಿಗೆ ಹೋಗುವಾಗ ಬಳಸಿದರೆ ಸ್ಟೈಲಿಷ್ ಲುಕ್ ಕೊಡುತ್ತದೆ, ಸಾಂಪ್ರದಾಯಿಕವಾಗಿ ಬಹಳ ಸುಂದರವಾಗಿ ಕಾಣುತ್ತದೆ. ಮಕ್ಕಳಿಗಂತೂ ಬಹಳ ಖುಷಿ. ತರಹ ತರಹದ ಉಡುಪುಗಳಿಗೆ ಮ್ಯಾಚಿಂಗ್ ಮಾಡಿ ಧರಿಸಬಹುದು.

ಬಳ್ಳಿಯೊಂದಿಗಿನ ಸ್ಕ್ರಂಚಿ: ಇಳಿ ಬಿಟ್ಟು ಎರಡು ಬಟ್ಟೆಯಿಂದ ಹೊಲಿದ ಬಳ್ಳಿ ಜೊತೆಗಿದ್ದರೆ, ಲೇಸನ್ನೂ ಬಳಸಬಹುದು ಅದರ ಸೊಗಸೇ ಬೇರೆ. ಹಾರಾಡುವ ಕೂದಲಿನೊಂದಿಗೆ ಇದೂ ಸುಂದರವಾಗಿ ಕಾಣುತ್ತದೆ. ಇದು ಇತರ ಸ್ಕ್ರಂಚಿಗಳಿಗಿಂತ ಸ್ವಲ್ಪ ವಿಭಿನ್ನವಾಗಿರುತ್ತದೆ.

ರೆಕ್ಕೆಯಿರುವ ಸ್ಕ್ರಂಚಿ: ಸ್ಕ್ರಂಚಿಯಲ್ಲಿ ಅಗಲವಾದ ಬಟ್ಟೆಯನ್ನು ಹೊಂದಿಸಿ ಎರಡು ರೆಕ್ಕೆಯಂತೆ ಕಾಣುವ ವಿನ್ಯಾಸ ಮಾಡಿದರೆ ಇದೂ ಸ್ಟೈಲಿಷ್ ಆಗಿ ಕಾಣುತ್ತದೆ. ■